(ಗೊಂದಲ) ಮಾನ್ಯ ಉಪಾಧ್ಯಕ್ಷರೆ, ಕಲಾಪ ನಡೆಸಿ. ಕಲಾಪ ನಡೆಸಬೇಕು. (ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೇನೂ ಬೇರೆ ಕೆಲಸವಿಲ್ಲವೇ? (ಗೊಂದಲ) ಸದನ ನಡೆಸಬೇಕೆಂದು ಸರ್ಕಾರಕ್ಕೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು: ಒಂದು ನಿಮಿಷ, slogans ಹಾಕಿ ನೀವು, ಆದರೆ, ಮಾನ್ಯ ಮಾಧುಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರು ಏನು ಹೇಳುತ್ತಿದ್ದಾರೆನ್ನುವುದನ್ನು ಕೇಳಿ.

(ಗೊಂದಲ)

(ಆ) ವಿಷಯ: ಸದನ ಮುಂದೂಡದೆ ಕಾರ್ಯಕಲಾಪ ನಡೆಸುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸದನ ನಡೆಸಬೇಕೆಂದು ಸರ್ಕಾರಕ್ಕೆ ಹೇಳಿ. (ಗೊಂದಲ) ಪ್ರತಿ ದಿನ ಸದನವನ್ನು ಮುಂದೂಡಿಕೊಂಡು ಹೋದರೆ ಆಗುವುದಿಲ್ಲ. ಸದನ ನಡೆಸಬೇಕೆಂದು ಸರ್ಕಾರಕ್ಕೆ ಹೇಳಿ.

ಶ್ರೀ ಎಂ.ಪಿ. ವೆಂಕಟೇಶ್: 4–5 ದಿವಸಗಳಿಂದ ಇದೇ ಕೆಲಸ.... (ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ರೀತಿ ಸದನವನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ..... ಮಾತೆತ್ತಿದರೆ ಸದನವನ್ನು ಮುಂದೂಡಿಬಿಟ್ಟು ಹೊರಟುಹೋದರೆ ಆಗುವುದಿಲ್ಲ. ಸದನ ನಡೆಸಬೇಕೆಂದು ನಾವೂ ಕೂಡ ಧರಣಿ ಕೂರಬೇಕಾಗುತ್ತದೆ. ಉಪಾಧ್ಯಕ್ಷರೆ, ನೀವು ಸರ್ಕಾರದವರಿಗೆ ಹೇಳಬೇಕು. 1ನೇ ತಾರೀಖಿನಿಂದ ಸದನ ನಡೆಯಲಿಲ್ಲ. ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿವೆ. ಕಾನೂನು ಸುವ್ಯವಸ್ಥೆ ಪ್ರಶ್ನೆ ಇದೆ. ಬರಗಾಲದ ಪ್ರಶ್ನೆ ಇದೆ. ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಕೋಮು ಗಲಭೆಗಳಾಗಿ ಜನರು ಸತ್ತಿದ್ದಾರೆ. ಇಂಥ ವಿಚಾರಗಳನ್ನೆಲ್ಲ ಚರ್ಚೆ ಮಾಡಬೇಕಾಗಿದೆ. ಸರ್ಕಾರದ ಮೇಲೆ ಒತ್ತಾಯ ಹಾಕಿ ಸದನವನ್ನು ನಡೆಸಬೇಕು. ಇಲ್ಲದಿದ್ದರೆ, ಸದನ ನಡೆಸಬೇಕೆಂದು ನಾವೂ ಧರಣಿ ಮಾಡುತ್ತೇವೆ. (ಗೊಂದಲ) ಸದನವನ್ನು ಸರ್ಕಾರ ಮುಂದೆ ಹಾಕಿಕೊಂಡು ಹೋಗುವುದೇ?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು ಹೊರಗೆ ಹಾಕಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸದನವನ್ನು ಪ್ರತಿ ದಿನ ಮುಂದಕ್ಕೆ ಹಾಕಿಕೊಂಡು ಹೋಗುವುದೇ?

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು ಹೊರಗೆ ಹಾಕಬೇಕು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಎಷ್ಟು ದಿವಸ ಸದನವನ್ನು ಮುಂದಕ್ಕೆ ಹಾಕುತ್ತೀರಿ? (ಗೊಂದಲ)

ಹಾಗಾದರೆ, ಸದನವನ್ನು ಏಕೆ ಕರೆಯಬೇಕಾಗಿತ್ತು?

ಶ್ರೀ ಎಂ.ಪಿ. ವೆಂಕಟೇಶ್: ಕಲಾಪ ನಡೆಸುವುಕ್ಕೆ ಬಿಡುತ್ತಿಲ್ಲ. ಇವರನ್ನು ಹೊರಗೆ ಹಾಕಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಸದನವನ್ನು ಏಕೆ ಕರೆಯಬೇಕಾಗಿತ್ತು?

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು ಹೊರಗೆ ಹಾಕಿ ಕಲಾಪ ನಡೆಸಿ. (ಗೊಂದಲ)ಇವರನ್ನು suspend ಮಾಡಿ. ಪ್ರತಿ ದಿನ ಇದೇ ಕೆಲಸವಾಯಿತು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವೇನು ಇಲ್ಲಿಗೆ ಆಟವಾಡುವುದಕ್ಕೆ ಬಂದಿದ್ದೀರಾ? (ಗೊಂದಲ)

ಹಲವಾರು ಸಮಸ್ಯೆಗಳಿವೆ.

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು suspend ಮಾಡಬೇಕು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ರಾಜ್ಯದ ಜನರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬರಗಾಲ ಬಂದಿದೆ. ಕುಡಿಯುವ ನೀರಿಲ್ಲ. ಜನರು ವಲಸೆ ಹೋಗುತ್ತಿದ್ದಾರೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ.

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು ಹೊರಗೆ ಹಾಕಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ದಿನ ಬೆಳಗಾದರೆ ಬೆಂಗಳೂರಿನಲ್ಲಿ land mafia ಜನರನ್ನು ಕೊಲೆ ಮಾಡುತ್ತಿದೆ. ಇದನ್ನು ಯಾರು ಚರ್ಚೆ ಮಾಡಬೇಕು? ಎಲ್ಲಿ ಚರ್ಚೆ ಮಾಡಬೇಕು? ಕಾನೂನು ಸುವ್ಯವಸ್ಥೆ ಕೆಟ್ಟು ಹೋಗಿದೆ. ದಿನ ಬೆಳಗಾದರೆ ಬೆಂಗಳೂರಿನಲ್ಲಿ murder ಆಗುತ್ತಿದೆ.

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು suspend ಮಾಡಿ ಹೊರಗೆ ಹಾಕಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಹಳ್ಳಿಯಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಜನರು ಸಾಯುತ್ತಿದ್ದಾರೆ. ನೀವು ಸದನ ನಡೆಸುತ್ತಿಲ್ಲ. ಮಾನ್ಯ ಉಪಾಧ್ಯಕ್ಷರೆ, ಸದನ ನಡೆಸಬೇಕೆಂದು ನೀವು ಸರ್ಕಾರಕ್ಕೆ ಹೇಳಬೇಕು.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು suspend ಮಾಡಿ ಇವರನ್ನು ಹೊರಗಡೆ ಹಾಕಬೇಕು. ಇವರು ಕೇವಲ ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ. Suspend ಮಾಡಿ ಹೊರಗಡೆ ಹಾಕಿ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವು ಸದನ ನಡೆಸಲೇಬೇಕು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವು ಸದನ ನಡೆಸಲೇಬೇಕು, ಇಲ್ಲಾಂದ್ರೆ ನಾವು ಸದನ ನಡೆಸಿ ಎಂದು ಧರಣಿ ಮಾಡಬೇಕಾಗುತ್ತದೆ. ನೀವು ಮಾತು ಎತ್ತಿದರೆ ಸದನ ಮುಂದಕ್ಕೆ ಹಾಕಿಕೊಂಡು ಹೋಗುವುದಲ್ಲ. ಅಂಥವರು ಈ ಸದನವನ್ನು ಏಕೆ ಕರೆದಿರಿ? ಅಂಥವರು ಸದನ ಕರೆಯಬಾರದಾಗಿತ್ತು. ಸದನ ನಡೆಸಲಿಕ್ಕೆ ಶಕ್ತಿ ಇಲ್ಲದೆ ಇರುವವರು x ಇಲ್ಲದೆ ಇರುವವರು ಸದನ ಕರೆಯಬಾರದಾಗಿತ್ತು. ಸದನ ನಡೆಸಲಿಕ್ಕೆ x ಇಲ್ಲದೆ ಇರತಕ್ಕಂಥವರು ನೀವು ಸದನವನ್ನು ಕರೆಯಬಾರದಾಗಿತ್ತು.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್ : ಇವರನ್ನು ಸಸ್‌ಪೆಂಡ್ ಮಾಡಿ ಸದನ ನಡೆಸಿ. ನಾವು ಇಲ್ಲಿ ಬಾಯಿಮುಚ್ಚಿಕೊಂಡು ಕುಳಿತುಕೊಂಡಿದ್ದೇವೆ. ಇವರು ಕೇವಲ ಪ್ರಚಾರಕ್ಕಾಗಿ ಹೇಳುತ್ತಿದ್ದಾರೆ. ಇವರು ಬಾವಿಯಲ್ಲಿಯೇ ಇರಲಿ ತಾವು ಕಲಾಪ ನಡೆಸಿ.

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಅಲ್ಲಿ ಸದನ ನಡೆಯುತ್ತಿದೆ. ಈ ಸದನ ಮಾತ್ರ ನಡೆಯುತ್ತಿಲ್ಲ. ಸದನ ನಡೆಸಲಿಕ್ಕೆ x ಇಲ್ಲದವರು ಅಧಿವೇಶನ ಏಕೆ ಕರೆಯಬೇಕು?

(ಗೊಂದಲ)

---

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀಮತಿ ಜೆ.ಸುನೀತಾ ವೀರಪ್ಪ ಗೌಡ: ಗಲಾಟೆ ಮಾಡುವವರನ್ನು ಹೊರಗಡೆ ಹಾಕಿ ಸದನ ನಡೆಸಿ.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್ : ಸಸ್‌ಪೆಂಡ್ ಮಾಡಿ ಕಲಾಪ ನಡೆಸಿ.

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ದಯಮಾಡಿ ಉಪಾಧ್ಯಕ್ಷರು ಸದನ ನಡೆಸಬೇಕು.

(ಗೊಂದಲ)

ಶ್ರೀಮತಿ ಜೆ.ಸುನೀತಾ ವೀರಪ್ಪ ಗೌಡ : ಅವರೆನ್ನಲ್ಲಾ ಹೊರಗಡೆ ಹಾಕಿ ಸದನ ನಡೆಸಿ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಒಂದನೇ ತಾರಿಖಿನ ದಿನದಿಂದ ಸದನ ನಡೆದಿಲ್ಲ. ಇವತ್ತು ತಾರೀಖು 19. ಸದನ ಒಂದು ದಿವಸ ನಡೆದರೆ ಲಕ್ಷಾಂತರ ರೂಪಾಯಿ ಖರ್ಚಾಗಿ ಹೋಗುತ್ತದೆ. ಇದು ಯಾರೆ ದುಡ್ಡು ? ಏಕೆ ಸಾರ್ವಜನಿಕರ ದುಡ್ಡು ಹಾಳು ಮಾಡಬೇಕು? ಯಾವ ಪುರುಷಾರ್ಥಕ್ಕೆ ?

(ಗೊಂದಲ)

ಉಪಾಧ್ಯಕ್ಷರು: ಏನು ಮಾತನಾಡುತ್ತೀದ್ದೀರಿ ಯಾರಿಗೇನು ಕೇಳಿಸುತ್ತಿಲ್ಲ.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್: ಪ್ರತಿ ದಿನ ಇವರು ಹೀಗೆ ಮಾಡುತ್ತಾರೆ. ಸಸ್‌ಪೆಂಡ್ ಮಾಡಿ ಇವರನ್ನು ಹೊರಗೆ ಹಾಕಿ. ಇವರನ್ನು ಕೇಳುವುದಕ್ಕಾಗುತ್ತದೆಯೆ? ಪ್ರತಿದಿನ ಪ್ರಚಾರಕ್ಕಾಗಿ ಇವರು ಹೀಗೆ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ವೆಂಕಟೇಶ್ ಏನು ಮಾತನಾಡುತ್ತಿದ್ದೀರೆಂದು ಯಾರಿಗೂ ಕೇಳಿಸುತ್ತಿಲ್ಲ.

(ಗೊಂದಲ)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಏಕೆ ಕೇಳಲ್ಲ ನಿಮಗೆ? ಒಂದನೇ ತಾರಿಖಿನ ದಿನದಿಂದ ಸದನ ನಡೆದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರು ನೀವು ಏನು ಹೇಳುತ್ತಿದ್ದೀರಿ ಹೇಳಿ. ನೀವು ಹೇಳಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ರಾಜ್ಯ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಒಂದು ಕಡೆ ಬರಗಾಲ. ಕಾನೂನು ಸುವ್ಯವಸ್ಥೆ, ಕೋಮು ಗಲಭೆ, ಕುಡಿಯುವುದಕ್ಕೆ ನೀರು ಇಲ್ಲ, ಜನ ವಲಸೆ ಹೋಗುತ್ತಿದ್ದಾರೆ, ಇಂಥ ಗಂಬೀರವಾದ ಸಮಸ್ಯೆಗಳನ್ನು ಈ ರಾಜ್ಯ ಎದುರಿಸುತ್ತಿರುವಾಗ ಸದನ ಸೇರಿಬಿಟ್ಟು ಏನು ಚರ್ಚೆಯಾಗುತ್ತಿಲ್ಲ. ಕಾವೇರಿ ಸಮಸ್ಯೆ ಉದ್ಭವವಾಗಿ ಇಡೀ ರಾಜ್ಯ ಸ್ತಬ್ಧವಾಗಿದೆ. ಏನೂ ಚರ್ಚೆಯಾಗುತ್ತಿಲ್ಲ. ರಾಜ್ಯದ ಜನರ ಸಮಸ್ಯೆ ಚರ್ಚೆಯಾಗುತ್ತಿಲ್ಲ. ಏಕೆ ಸದನ ಕರೆಯಬೇಕು? ಸದನ ನಡೆಸಲಿಕ್ಕೆ ಶಕ್ತಿ ಇಲ್ಲದಿರತಕ್ಕಂಥವರು, x ಯಿಲ್ಲದಿರತಕ್ಕಂಥವರು ಸದನ ಕರೆಯಬಾರದು. ಕರೆದವರು ಸದನ ನಡೆಸಬೇಕು. ಆದುದರಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ, ನೀವು ಸದನ ನಡೆಸಬೇಕು. ಅದು ನಿಮ್ಮ ಜವಾಬ್ದಾರಿ, ಅಧ್ಯಕ್ಷರ ಜವಾಬ್ದಾರಿ, ನೀವು ಸರ್ಕಾರಕ್ಕೆ ಸದನ ನಡೆಸಿ ಎಂದು ಹೇಳಬೇಕು.

(ಗೊಂದಲ)

(ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದವರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮೂಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 13 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ:ದಿನಾಂಕ 20ನೇ ಫೆಬ್ರವರಿ 2007 ರಂದು ಬೆಳಿಗ್ಗೆ 11.00ಗಂಟೆಗೆ ಸೇರಲು ನಿಶ್ಚಯಿಸಿತು)

---

x ಈ ಪದವನ್ನು ಮಾನ್ಯ ಸಭಾಧ್ಯಕ್ಷರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.